ಅಂತಹ ಗೋಧೂಳಿ ಸಂಜೆಯಲ್ಲಿ ಎಲ್ಲೋ ಹೋಗಿದ್ದ ಶಿವಣ್ಣನಿಗೆ ಈಚಲ ಕಾರಂಜಿ ಚೌಕಳೀ ಸೀರೆ ಉಟ್ಟ ಪಾರ್ವತಿ ಎದುರಾದಳು.

'ಏ...! ಈ ಸ್ಯಾಲೆ ಗಂಗೀದಲ್ವೇನಾ...?' ಎಂದ ಸಿಟ್ಟಿನಿಂದ. ಹೌದೆಂಬಂತೆ ತಲೆಯನ್ನು ಕೆಳ ಮಾಡಿದಳು ಪಾರ್ವತಿ. ಆ ಸಂಜೆಯಲ್ಲಿ ಅವಳು ಆಕರ್ಷಣೀಯವಾಗಿ ಕಂಡರೂ, ಗಾಳಕ್ಕೆ ಕಟ್ಟಿದ್ದ ಹುಳುವನ್ನು ಇವನು ಕಚ್ಚಲಿಲ್ಲ.

'ಈ ಸ್ಯಾಲೆ ನಿಂಗ್ಯಾರು ಕೊಟ್ರು...?'

'ಇಟ್ಟು ಇಟ್ಟು ಹಾಳಾಗತ್ತೇ ಅಂತ ಅವ್ವಾನೇ ಗಾಳಿ ಆಡ್ಯಾಕೆ ಅಂತ ಕೊಟ್ಲು.'

'ಹಾಳಾಗಲೀ... ಏನಾರಾಗ್ಲೀ... ಇದೆಲ್ಲಾ ಅಧಿಕ ಪ್ರಸಂಗ ಆಕೀಗ್ಯಾಕಂತಾ? ಕಂಡೋರ ಪದಾರ್ಥ ಮುಟ್ಬಾರ್ದು ಅಂತ ಆಕಿಗೆ ಗೊತ್ತಿಲ್ಲೇನ?' ಶಿವಣ್ಣ ಕೋಪದಿಂದಲೇ ಮನೆ ಹೊಕ್ಕು ಮುದುಕಿಯನ್ನು ತರಾಟೆಗೆ ತೆಗೆದುಕೊಂಡ.

'ಕಾಕೀ... ನೀ ಯಾಕ ಗಂಗೀ ಸ್ಯಾಲೆ ಪಾರೋತಿಗೆ ಕೊಟ್ಟೆ?... ನಿನ್ನ ಇಲ್ಲಿ ಇಟ್ಕಂಡಿದ್ದೇ ತಪ್ಪಾತು...! ನೀವು ಹೊಂಟ್ಹೋಗಿ... ನಾನು ಈ ಹಟ್ಟಿಗೆ ಬಾಗ್ಲಿಗೆ ಬೀಗ ಜಡಿದು ಮೈಸೂರಿಗೆ ಒಂಟೋಗ್ತೀನಿ... ಪಾರೋತಿನ ನಂಗೆ ಕಟ್ಟಿ ಹಾಕೊ ಕನ್ಸು ಕಾಣ್ಬೇಡ ಕಂಡ್ಯಾ...?'

'ಶಿವಾ... ನಿಂಗೆ ಬಾಳು ಹಿಂಗಾಯ್ತಲ್ಲಾ ಅಂತ ನಾ ಚಿಂತಿ ಮಾಡ್ದಿ... ಅದೇ ತಪ್ಪಾಯ್ತು ನೋಡು... ಗಂಗಿ ಹಾಳಾಗಿ ಹೋದ್ಲು... ಪಾರೋತಿನಾರಾ ನಿಂಗೆ ಸುಖ ಕೊಡ್ಲಿ ಅಂತ ನಾ ಇದ್ರೆ... ನೀನು ನನ್ನೇ ಸಿಟ್ಟು ಮಾಡ್ಲಿಕ್ಕೆ ಹತ್ತಿದ್ದೀ... ನಂಗ್ಯಾಕೆ ಬ್ಯಾಕು... ನಿನ್ನ ಉಸಾಬರಿ ನಂಗೆ ಬೇಡ... ನಾಳೀಕೇ ನಾನು ಹೊಂಟೆ... ಹೋಗಾ ಮುಂಚೆ ಏನಾದ್ರೂ ಕದ್ದು ಒಯ್ತೀನಿ ಅಂತ ತಿಳ್ಕಾ ಬ್ಯಾಡ!... ನಿಂಗೆ ಅನುಮಾನ ಜಾಸ್ತಿ ಐತೆ... ನನ್ನ ಗಂಟು ಮೂಟೆ ಜಪ್ತಿ ಮಾಡಿ ನಮ್ಮನ ಕಳ್ಸು...' ಎಂದು ಅಳಲಾರಂಭಿಸಿ, ಮೊಮ್ಮಗನನ್ನು ಸೊಂಟಕ್ಕೆ ಇರುಕಿ ಕೊಂಡು ಬೀದಿಗಿಳಿದುಬಿಟ್ಟಳು. ಅಜ್ಜಿಯ ಸೆರಗು ಹಿಡಿದ ಹೆಣ್ಣುಮಗು ಕಕ್ಕಾಬಿಕ್ಕಿಯಾಗಿ ಈ ಜಗಳವನ್ನು ನೋಡುತ್ತಿದ್ದರೆ ಪಾರೋತಿ ತಾನು ಇಟ್ಟಿದ್ದ ಗಂಗೆಯ ಸೀರೆ ಕಳೆದು ಬಿಸಾಟು, ತನ್ನ ಹರಕು ಸೀರೆ ಸುತ್ತಿಕೊಂಡು ಮೂಲೆಯಲ್ಲಿ ಕುಳಿತುಬಿಟ್ಟಳು.

ಇದೆಲ್ಲಾ ಬರೀ ನಾಟಕವಾಗಿತ್ತು. ಶಿವಣ್ಣ ಮೈಸೂರಲ್ಲಿ ಇದ್ದಾಗಲೇ ಈ ಇಬ್ಬರೂ ಹೆಂಗಸರೂ ಬೇಕು ಬೇಕಾದ ಒಡವೆ, ವಸ್ತುಗಳನ್ನು ಅಷ್ಟಿಷ್ಟು ಸಾಗಿಸಿಯೇ ಆಗಿತ್ತು. ಅದರ ಬಗ್ಗೆ ಶಿವಣ್ಣನಿಗೆ ಅನುಮಾನವಿದ್ದರೂ ಆ ಬಗ್ಗೆ ಏನೂ ಹೇಳಲು ಹೋಗಲಿಲ್ಲ. ಗಂಗೆ, ತನ್ನ ಮೈ ಮೇಲೆ ದಿನ ನಿತ್ಯ ಹಾಕುವ ಕೆಲವು ಚಿನ್ನದೊಡವೆ ಹಾಕಿಕೊಂಡು ಹೋಗಿದ್ದರೂ, ಹಳೇ ಕಾಲದ ಬುಗಡಿ, ಬೆಂಡೋಲೆ, ಟಿಕ್ಕಿ, ಇನ್ನು ಯಾವ್ಯಾವುದೊ ಪೆಟ್ಟಿಗೆಯಲ್ಲಿ ಉಳಿದದ್ದು ಶಿವಣ್ಣ ಬಲ್ಲ.

ಆ ಮುದುಕಿ ಜಗಳ, ಕದನ ಇಲ್ಲದೇ ತೊಲಗಿ ಹೋಗಲಿ ಎಂದು ಸುಮ್ಮನಾದ. ಬಂಗಾರದ ಬೆಲೆಗಿಂತಾ ಅವರನ್ನು ಓಡಿಸುವುದು ಅವನಿಗೆ ಮೌಲಿಕವಾಗಿ ಕಂಡಿತ್ತು. ಗಂಗಾಳ ಮೈಮೇಲಿನ ಸೀರೆ ಪಾರೋತಿ ಮೈಮೇಲೆ ಬಂದದ್ದು ಸಹಿಸಲಾರದಾಗಿದ್ದರೂ, ಗಂಗಾ ಎಂದೂ ಧರಿಸದ ಹಳೇ ಕಾಲದ ಬಂಗಾರ ಒಡವೆಗಳು ಅವನಿಗೆ ಆ ಕ್ಷಣದಲ್ಲಿ 'ಪೀಡೆ ಕಳೆಯಿತು... ಒಡ್ವೆ ಹೋದ್ರೆ ಹೋಗ್ಲಿ... ನಾನು ಸಿಗದಿದ್ರೂ ಒಡ್ವೆನಾರಾ ಸಿಕ್ತಲ್ಲ ಅಂತ ಒಂದಿಷ್ಟು ಖುಷಿ ಪಡೀಲಿ' ಎಂಬ ಸಮಾಧಾನವನ್ನು ಮನಶ್ಯಾಂತಿಗಾಗಿ ತಂದುಕೊಂಡು ಬಿಟ್ಟ.

ಮಾರನೇ ದಿನವೇ ಆ 'ಕಾಕಿ' ಮಗಳು, ಮೊಮ್ಮಕ್ಕಳೊಂದಿಗೆ ಹೊರಟು ನಿಂತಳು.

'ನೋಡಪ್ಪಾ... ನಿನ್ನ ಮ್ಯೇಲೆ ನಂಗೇನೂ ಹಗೆ ಇಲ್ಲ... ನಿಂಗೆ ಅಟ್ಟಿಟ್ಟೇ ಹೊರಟಿದ್ದೀನಿ... ಉಸ್ಲಿ, ಒಣಗಿ, ಬೊಳ್ಳುಳ್ಳಿ ಚಟ್ನಿ, ಜ್ವಾಳದ ರೊಟ್ಟಿ ಎಲ್ಲಾ ಮಾಡಿಟ್ಟೀನಿ... ಎಂದಾದ್ರೂ ನಿಂಗೆ ಬೇಕಂದ್ರ ಹೇಳು... ನಾನು ಮತ್ತೆ ಬರುವಾಕೆ ಇದೀನಿ... ಪಾರೂಗೆ ಬ್ಯಾರೆ ಎಲ್ಲಾದ್ರೂ ಒಂದು ನೆಲೆ ನೋಡ್ಕಂತೀನಿ... ದೇವ್ರು ಬಯಸಿದ್ರೆ ಆದೀತು. ಇಲ್ದಿದ್ರೆ ಅವ್ನು ಹಣೇಲಿ ಬರ್ದಂಗೆ ಬಾಳ್ತಾಳ... ಕೂಲಿನಾಲಿ ಮಾಡ್ತಾ ಹೆಂಗೋ ಈ ಎರಡು ಕೂಸುಗಳ್ನ ಬೆಳಸ್ಕೋತಾಳ... ನಿಂಗೆ, ಅವ್ಳಿಗೆ ಇಬ್ರಿಗೂ ಒಂದು ಸಂಸಾರ ಆಗ್ಲೀ ಅಂತ ನಾನು ಆಸಿಪಟ್ಟೆ.... ಹೋಗ್ಲಿ ಬಿಡು...'

ತಲೆ ಮೇಲೆ ಗಂಟು, ಕಂಕುಳಲ್ಲಿ ಕೂಸು, ಕೈಯಲ್ಲಿ ಹುಡುಗಿ, ಪಕ್ಕದಲ್ಲಿ ಪಾರೂವನ್ನು ಇಟ್ಟುಕೊಂಡು ಬೀದಿಗಿಳಿದ ಮುದುಕಿ ಕಂಡು ಅವನಿಗೆ ಏನನ್ನಿಸಿತೋ,

'ಸೊಲ್ಪ... ನಿಲ್ಲು ಕಾಕೀ... ಒಳೀಕೆ ಬಾ...' ಎಂದವನೇ ಮಲಗುವ ಕೋಣೆಗೆ ಹೋಗಿ, ಸೋದರ ಮಾವ ಯಲ್ಲಪ್ಪ ಕೊಟ್ಟಿದ್ದ ಹೊಲದ ಹಣ ಸೊಸೈಟಿಯಿಂದ ತಂದುಕೊಂಡು ಇಟ್ಟಿದ್ದನ್ನು ತೆಗೆದುಕೊಂಡು, ಅದರಲ್ಲಿ ಒಂದಷ್ಟು ನೋಟುಗಳನ್ನು ಅವಳ ಕೈಗಿತ್ತ.

ಮುದುಕಿಯ ಕಣ್ಣುಗಳು ಹಣದ ಪುಡಿಕೆ ಕಂಡು ಅರಳಿಕೊಂಡಿತು.

'ಇದೆಲ್ಲಾ ಯಾಕಪ್ಪಾ...' ಎಂದಳು!

'ಇರ್ಲಿ, ಇಟ್ಕಾ... ಮಕ್ಕಳಿಗ್ಯಾತಕ್ಕಾದ್ರೂ ಬೇಕಾದೀತು...'

'ಹೋಗಿ ಬರ್ತೀವಿ... ಆ ದ್ಯಾವ್ರು ಒಳಿತು ಮಾಡ್ಲಿ...' ಎಂದು ರಸ್ತೆ ಮೇಲೆ ನಡೆಯಲು ತೊಡಗಿದಾಗ ಅವಳ ಮನಸ್ಸು ಇನ್ನೂ ಆಸೆ ಇಟ್ಟುಕೊಂಡೇ ಉಳಿಯಿತು. 'ಇಂವ ನನ್ನ ಹಾದೀಗೇ ಎಂದಾದ್ರೂ ಬಂದೇ ಬರ್ತಾನ...! ಒಂಟಿಯಾಗಿ ಇವನೆಲ್ಲಿ ಇಡೀ ಜೀವ್ನ ಕಲೀತಾನೆ' ಪಾರೂನ ಬಾಳು ಬೇಗ ಬಂಗಾರ ಆಗ್ಲಿ....'

ಬಸ್ಸಲ್ಲಿ ಕುಳಿತು ಹೊರ ಹೊರಟಾಗಲೂ ಮಗಳಿಗೆ ಹೇಳದೆ ಇರಲಿಲ್ಲ.

'ನೋಡವ್ವ ಪಾರೂ... ಈ ಶಿವಂಗ ಎರಡೆರಡು ಲಗ್ನ ಆದ್ರೂ ಒಂದು ಹುಳ ಹುಟ್ನಿಲ್ಲ... ಅವ್ನ ಉಡುಕಿ ಮಾಡ್ಕಂಡ್ರೆ ಈ ಹೊಲ, ಮನಿ ಎಲ್ಲಾ ನಿನ್ನ ಈ ಎಲ್ಡು ಮಕ್ಳಿಗೇ ಬರ್ರೈತಿ!...'

ಅವಳ ಕನಸಿನೊಡನೆಯೇ ಬಸ್ಸು ಸಾಗಿ ಅವಳ ಗ್ರಾಮ ಮುಟ್ಟಿಸಿತ್ತು.

ಆ ಮುದುಕಿ ಮಾಡುತ್ತಿದ್ದ ವಟವಟ ನಿಂತುಹೋಗಿತ್ತು. ಪಾರೂನ ಮಕ್ಕಳ ಗದ್ದಲ, ಅಳು, ನಗು, ಚಂಡಿ ಎಲ್ಲಾ ಇರದೆ ಮನೆ ಭಣಗುಟ್ಟಿತು. ಇದರೊಂದಿಗೆ ಪಾರೋತಿಯ ಚಿಟ್ಟೆಯಂತಹ ಚಟುವಟಿಕೆಯೂ ಇಲ್ಲದ್ದಾಗಿ ಅವನಿಗೇಕೊ ಮನೆಯಲ್ಲಿರಲು ಬೇಸರವೇ ಆಯಿತು. ಶಿವಣ್ಣನ ಸವಾರಿ ಯಲ್ಲಪ್ಪ ಮಾವನ ಮನೆಗೆ ಚಿತ್ತೈಸಿತು. ಅವನಾದರೊ ಈ ವಯಸ್ಸಿನಲ್ಲೂ ಕ್ಷಣ ಸುಮ್ಮನೇ ಕುಳಿತು ಕೊಳ್ಳುವನಲ್ಲ. ಜೋಳದ ಕಡ್ಡಿಗಳನ್ನು ಮಚ್ಚಿನಿಂದ ತುಂಡು ಮಾಡುತ್ತ ಅವನ ಹಟ್ಟಿ ಮುಂದೆ ಬೇವಿನ ಮರದ ಅಡಿ ಕುಳಿತಿದ್ದ.

'ಮಾವಾ... ಹ್ಯಾಂಗಿದ್ದೀ...' ಎನ್ನುತ್ತ ಅವನ ಸಮೀಪ ಶಿವಣ್ಣ ಹೋದ.

'ಓ...! ಶಿವಣ್ಣಯಾನಾ... ಬಾಪ್ಪಾ... ಬಾ... ಬಾ... ಕುಂತ್ಕ...' ಎಂದು ಮಚ್ಚನ್ನು ಕೆಳಗಿಟ್ಟು, ಜೋಳದ ದಂಟುಗಳನ್ನು ತಳ್ಳಿ, ಕೇಳಿದ.

'ಏನಾದ್ರಾ ಆಸರ ತರಸ್ಲೇನಾ?... ಸೊಸಿ ಪಸಂದಾಗಿ ಚಹ ಮಾಡ್ತಾಳು'

'ಏನೂ ಬ್ಯಾಡ ಮಾಮಾ... ನ್ಯಾರಿ ಮುಗ್ಸೇ ಬಂದೀನಿ...'

'ನಿಂಗೇನಪ್ಪಾ ಬುಡು... ಆ ಪಾರೋತಿ ಛಲೋದಾಗಿ ನೊಡ್ಕೊಂತಾಳೆ... ನಿನ್ನ ನೆತ್ತಿ, ಹೊಟ್ಟಿ ನೋಡ್ಕಾಳಕ್ಕೆ ಅವ್ವ ಅವ್ವಾನೂ ಆಳಾಲಲ್ಲಾ...!' ಎಂದು ಕುಹಕವಾಡಿದ.

ಶಿವಣ್ಣನಿಗೆ ಆ ಕಾಕಿ ಮತ್ತವಳ ಮಗಳು ಪಾರು ಬಗ್ಗೆ ಎಷ್ಟೆಲ್ಲಾ ದೂರು ಹೇಳಿದರೂ ಶಿವಣ್ಣ ಒಂಟಿಯಾಗಿ ಊರಿಗೆ ಬಂದಮೇಲೆ ಪಾರು ಸೆರಗು ಹಿಡಿದು ಸುತ್ತುತ್ತಿದ್ದಾನೆಂದು ಯಲ್ಲಪ್ಪನಿಗೆ ಅನುಮಾನವಿತ್ತು. ಅವನೊಬ್ಬನೇ ಅಲ್ಲ ಊರ ಜನರೆಲ್ಲಾ ಅವ್ನು ಪಾರೂವನ್ನು ಉಡುಕೆ ಮಾಡ್ಕೋತಾನೆಂದು ಆಡಿಕೊಳ್ಳುತ್ತಿದ್ದರು.

ಶಿವಣ್ಣ ಹೇಳಿದ,

'ಮಾವಾ... ಆ ಇಬ್ರು ಹೆಂಗಸ್ರನ್ನೂ ಅವ್ರ ಊರಿಗೇ ಕಳ್ಸಿಬುಟ್ಟೆ...'

'ಯಾನಾ...? ಯಾಕಾ!?...'

'ನನಗವ್ರು ಛಲೊ ಅನಿಸ್ಲಿಲ್ಲ...'

'ಅದ್ಯಾಕೊ ತಮ್ಮಾ... ನಿನ್ನ ಹಟ್ಯಾಗೆ ಅವ್ರು ಕಾಯಂ ಅಂಡ್ಕೇಂಡು ಮಂದಿ ಎಲ್ಲಾ ಹೇಳ್ಕೊಳ್ಳಿಕ್ಕೆ ಹತ್ತಿದ್ರಲ್ಲಪ್ಪಾ... ನಾವೂ ಕಜ್ಜಾಯ, ಖೀರು ತಿನ್ನೋ ಕಾಲ ಸನಿಹಕ್ಕೆ ಬಂತು ಅಂದ್ಕೋತಿದ್ವಪ್ಪಾ...! ಉಡ್ಕಿ ಮಾಡ್ಕೋತೀಯ ಅಂದ್ಕೊಂಡಿದ್ದಿ...'

'ನಾನು?... ಉಡ್ಕಿ...? ಅದೆಲ್ಲಾ ನಿಂಗ್ಯಾರು ಹೇಳದ್ರು...'

'ಮತ್ತೆ...?'

'ನಾ... ಮತ್ತೆ... ಮೈಸೂರ್ಗೇ ಹೊಂಟೆ...'

'ಅಯ್ಯಾ... ಅಲ್ಲೇನೈತಿ? ಅದೇನು ನಮ್ಮ ಜನ್ವಾ... ಊರಾ?...'

'ನನಗ... ಯಾವ ಜನಾನೂ ಬ್ಯಾಡ... ಯಾವ ನೆಲನೂ ಬ್ಯಾಡ ಮಾವ... ಹೊಲ–ನೆಲ ನೀನಾ ನೋಡ್ತೀ... ಆ ನನ್ನ ಹಟ್ಟಿ ಯಾನು ಮೈಸೂರ ಅರಮನೀನಾಯಾನಾ... ಹಟ್ಟಿಗೆ ಬೀಗ ಜಡಿದು ಒಂಟೋಯ್ತೀನಿ...'

'ಮಳ್ಳು ಹಿಡಿದ್ದಾಂಗ ಯಾಕೆ ಮಾತಾಡ್ತಿಯೊ ಅಪ್ಪಾ?...'